# ಕೊನೆಯ ವಿದಾಯ

ನೈಋತ್ಯ ಎಂಬೊಬ್ಬ ಉದಯೋನ್ಮುಖ ಕವಿ ಕತೆಗಾರ ಇದ್ದ. ಈಗಿಲ್ಲವೇ ಎಂದರೆ ಇದ್ದಾನೆ. ಆದರೆ 'ಇದ್ದ' ಎಂದುದಕ್ಕೆ ಒಂದು ಅರ್ಥ ಇದೆ. ಅದನ್ನು ಕೇಳಿದರೆ ನೀವು ವಿಸ್ಮಯಗೊಳ್ಳುತ್ತೀರಿ. ಆರಂಭದ ಕಾಲದಲ್ಲಿ ಕೆಲವು ಪ್ರಾಮಿಸಿಂಗ್ ಕತೆ ಕವಿತೆಗಳನ್ನು ಬರೆದುದು ಬಿಟ್ಟರೆ ನಂತರ ಒಮ್ಮೆಲೇ ಅವನು ರಂಗದಿಂದ ಮಾಯವಾಗಿಬಿಟ್ಟ. ಮೊದಲು ಅವನಿಗೆ 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಒಮ್ಮೆ, ಅದೇ ಪತ್ರಿಕೆಯ ಕವಿತಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಎರಡು ಬಾರಿ ಸಿಕ್ಕಿತ್ತು. ಆಗ್ನೇಯ ಬಗ್ಗೆ ಕೇಳಿದ್ದೇವೆ, ಆದರೆ ಈ ನೈಋತ್ಯ ಯಾರು ಎಂದು ಜನ ಕುತೂಹಲ ಪಡುತ್ತಿರುವಂತೆಯೇ ಅವನು ಮುಗಿದೂ ಹೋದ. ಏನಾಯಿತು ಅವನಿಗೆ?

★★★

ಸಪ್ನ ಗಡಿಬಿಡಿಯಲ್ಲಿದ್ದವಳಂತೆ ಬಂದು ಅವನ ಎದುರು ಕುಳಿತು ಮುಗುಳ್ನಕ್ಕಳು. ದಣಿದವಳಂತೆ ಕಂಡಳು.

"ದಣಿದಿದ್ದೀಯಾ," ಎಂದ ನೈಋತ್ಯ.

"ಓಡಾಟ," ಎಂದಳು. "ತುಂಬ ಹೊತ್ತಿಂದ ಕಾಯ್ತಿದ್ದಿರಾ? ಸಾರಿ."

"ನಿನಗೋಸ್ಕರ ಜೀವಮಾನವೆಲ್ಲಾ ಕಾಯಲು ರೆಡಿಯಾದವನಿಗೆ ಅರ್ಧ ಗಂಟೆಯೇನು ಮಹಾ."

"ನೋಡಿದಿರ, ವಾರದಲ್ಲಿ ಮದುವೆಯಾಗಿ ಹೋಗುವವಳೆದುರು ನೀವು ಇಂಥಾ ಮಾತು ಅನ್ನಬಾರದು. ಅದಕ್ಕೇ ನಾನು ಬರಲ್ಲ ಅಂದುದು. ಆದರೂ ಇದು ಕೊನೆಯ ವಿದಾಯ ಅಂತ ಹೇಳಿ ನನ್ನನ್ನ ಒತ್ತಾಯಿಸಿದಿರಿ. ದಯವಿಟ್ಟು ನನ್ನ ಮನ ನೋಯಿಸುವ ಮಾತು ಆಡಬೇಡಿ."

ಕೈಚೀಲದಿಂದ ಕನ್ನಡಿ ತೆಗೆದು ಮುಖ ತೀಡಿಕೊಂಡಳು.

"ಕಾಫಿಗೆ ಹೇಳ್ಲ?"

"ನಾನೀಗ ಕಾಫಿ ಬಿಟ್ಟು ಚಾ ಸುರುಮಾಡಿದ್ದೇನೆ."

"ನಿನ್ನೆ ಮೊನ್ನೆ ವರೆಗೆ ನೀನು ಕಾಫಿ ಪ್ರಿಯಳಾಗಿದ್ದಿ?"

"ರಮಣನಿಗೆ ಕಾಫಿ ಇಷ್ಟ."

"ರಮಣ ಯಾರು?"

"ನನ್ನ ವುಡ್ಬಿ, ನಾ ಹೇಳಿಲ್ವೆ ನಿಮಗೆ?"

ಆ 'ವುಡ್ಬಿ' ಪದ ಕೇಳಿ ನಾಲಿಗೆ ಕಚ್ಚಿಕೊಂಡವನಂತೆ ನೈಋತ್ಯ ನೊಂದ.

"ಅವನ ಬೇಕು ಬೇಡಗಳಿಗೆ ನೀನು ಹೊಂದಿಕೊಳ್ಳುತ್ತಿರುವಿ?"

"ಹಾಗಲ್ವೆ ಗಂಡಹೆಂಡತಿ ಇರಬೇಕಾದ್ದು?"

ಅವಳ ಪ್ರತಿಯೊಂದು ಮಾತೂ ಅವನ ಹೃದಯವನ್ನು ಕೊರೆಯುತಿತ್ತು.

"ಯಾಕೆ ಹಾಗೆ ಮುಖ ಮಾಡುತ್ತೀರಿ? ನನಗೆ ಬೇಸರವಾಗುತ್ತೆ. ನನ್ನೆದುರು ಹಾಗೆ ಮಾಡಬಾರದು ಎಂದು ನಾನು ಹೇಳಿಲ್ವೆ, ಹಾಗಿದ್ದರೆ ಮಾತ್ರ ನಾನು ಬರುವುದು ಎಂದು?"